ಕಾರಂಜಾ ಯೋಜನೆಯ ವ್ಯಾಪ್ತಿಯಲ್ಲಿರುವ ಮರಕಲ್ ಗ್ರಾಮಕ್ಕೆ ಜಲಾಶಯದ ಹಿನ್ನೀರು ನುಗ್ಗಿ ಗ್ರಾಮದ ಜನರಿಗೆ ತೊಂದರೆಯಾಗಿರುವುದು

1452 (1898) - ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್): ಮಾನ್ಯ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರಂಜಾ ಯೋಜನೆಯ ವ್ಯಾಪ್ತಿಯಲ್ಲಿರುವ ಮರಕಲ್ ಗ್ರಾಮಕ್ಕೆ ಜಲಾಶಯದ ಹಿನ್ನೀರು ನುಗ್ಗಿ ಗ್ರಾಮದ ಜನರಿಗೆ ತೀವ್ರವಾದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮರಕಲ್ ಗ್ರಾಮವನ್ನು ಕಾರಂಜಾ ಯೋಜನೆಯ ಪುನರ್ ವಸತಿ ಗ್ರಾಮವನ್ನಾಗಿ ಸೇರಿಸಿಕೊಂಡು ಈ ಗ್ರಾಮಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ಮಳೆಗಾಲದ ಸಮಯದಲ್ಲಿ ಕಾರಂಜಾ ಯೋಜನೆಯ ಹಿನ್ನೀರಿನಿಂದ ಹಾಗೂ ಗ್ರಾಮದ ಪಕ್ಕದಲ್ಲೇ ಇರುವ ಹಳ್ಳದ ನೀರಿನಿಂದಲೂ ಮರಕಲ್ ಗ್ರಾಮದ ಕೆಲವು ಮನೆಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಮರಕಲ್ ಗ್ರಾಮವನ್ನು ಕಾರಂಜಾ ಯೋಜನೆಯ ಪುನರ್ ವಸತಿ ಗ್ರಾಮವನ್ನಾಗಿ ಸೇರಿಸಿಕೊಳ್ಳುವ ಬಗ್ಗೆ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಈ ಸರ್ವೆ ಕಾರ್ಯವನ್ನು ಮಾರ್ಚ್ 2002ರ ಅಂತ್ಯದವರೆಗೆ ಪೂರೈಸಿ ಪುನರ್ ವಸತಿಯ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಉದ್ಭವಿಸುವುದಿಲ್ಲ.

ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಕೇಂದ್ರ ಮಂಜೂರಾತಿ

1453 (1850) - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ಮಂಜೂರಾತಿಗಾಗಿ ರಾಜ್ಯ ಸರ್ಕಾರವು ಇಲ್ಲಿಯವರೆಗೆ ಕೇಂದ್ರಕ್ಕೆ ಕಳುಹಿಸಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಪ್ರಸ್ತಾವನೆಗಳು ಯಾವುವು;

ಆ) ಇವುಗಳ ಪೈಕಿ ಇನ್ನೂ ಕೇಂದ್ರದಿಂದ ಮಂಜೂರಾತಿ ಬರದೇ ಇರತಕ್ಕ ಯೋಜನೆಗಳಾವುವು;

ಇ) ಅವುಗಳಿಗೆ ಮಂಜೂರಾತಿ ನೀಡಲು ಕೇಂದ್ರ ಸರ್ಕಾರವು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) 1994-95ನೇ ಸಾಲಿನಿಂದ ಇಲ್ಲಿಯವರೆಗೆ ಕೆಳಕಂಡ ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದೆ:

1. ಮಾರ್ಕಂಡೇಯ ಯೋಜನೆ
2. ತುಂಗಾ ಮೇಲ್ದಂಡೆ ಯೋಜನೆ
3. ಭೀಮಾ ಏತ ನೀರಾವರಿ ಯೋಜನೆ
4. ಸಿಂಗಟಾಲೂರು ಏತ ನೀರಾವರಿ ಯೋಜನೆ
5. ಉಡುತೊರೆಹಳ್ಳ ಯೋಜನೆ
6. ಕೃಷ್ಣಾ ಮೇಲ್ದಂಡ ಯೋಜನೆ - 2ನೇ ಹಂತ
7. ವಾರಾಹಿ ಯೋಜನೆ

ಆ) 1. ಮಾರ್ಕಂಡೇಯ ಯೋಜನೆ

2. ತುಂಗಾ ಮೇಲ್ದಂಡೆ ಯೋಜನೆ
3. ಭೀಮಾ ಏತ ನೀರಾವರಿ ಯೋಜನೆ
4. ಸಿಂಗಟಾಲೂರು ಏತ ನೀರಾವರಿ ಯೋಜನೆ
5. ಉಡುತೊರೆಹಳ್ಳ ಯೋಜನೆ
6. ವಾರಾಹಿ ಯೋಜನೆ

ಇ) ಈ ಪ್ರಸ್ತಾವನೆಗಳಿಗೆ ಕೇಂದ್ರ ಜಲ ಸಂಪನ್ಮೂಲ ಆಯೋಗದ ವಿವಿಧ ನಿರ್ದೇಶನಾಲಯಗಳಿಂದ ಒಪ್ಪಿಗೆ ಪಡೆಯಬೇಕಾಗಿರುವುದರಿಂದ ವಿಳಂಬವಾಗುತ್ತಿದೆ. ಈ ಯೋಜನೆಗಳ ಅನುಮೋದನೆ ಬಗ್ಗೆ ದಿನಾಂಕ 3-11-2001 ರಂದು ಕೇಂದ್ರ ಜಲ ಸಂಪನ್ಮೂಲ ಕಾರ್ಯದರ್ಶಿಯವರ ಜೊತೆ ಸಭೆ ನಡೆಸಿ ಮೇಲೆ ತಿಳಿಸಿರುವ ಎಲ್ಲಾ ಯೋಜನೆಗಳಿಗೆ ಮಂಜೂರಾತಿ ನೀಡುವಂತೆ ವಿನಂತಿಸಲಾಗಿದೆ. ಅಲ್ಲದೆ ದಿನಾಂಕ 6-3-2002 ರಂದು ಕೇಂದ್ರ ಜಲ ಸಂಪನ್ಮೂಲ ಕಾರ್ಯದರ್ಶಿಯವರೊಂದಿಗೆ ಮತ್ತೊಮ್ಮೆ ಚರ್ಚಿಸಲಾಗಿದ್ದು ತ್ವರಿತವಾಗಿ ಅನುಮೋದನೆಯನ್ನು ನೀಡುವಂತೆ ಕೋರಲಾಗಿದೆ.

ಬೆಂಗಳೂರು ನಗರದಲ್ಲಿ ಹಸಿರು ಕಾರ್ಡ್ ವಿತರಣೆ

1454 (1851) - ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಕಡು ಬಡವರಿಗೆ ಹಸಿರು ಕಾರ್ಡು ಹಂಚಲು ಸರ್ಕಾರ ಕೈಗೊಂಡ ಕ್ರಮಗಳೇನು;